

# ಸಿಂಹ ಅಲ್ಲ.. ನಾಯಿ!

ಈ ಪ್ರಾಣಿಯನ್ನು ನೋಡಿದವರು ಪಕ್ಕನೆ ಇದು ಸಿಂಹ ಎಂದು  ಭಾವಿಸುವುದು ಸಹಜ. ಆದರೆ ಇದು ಸಿಂಹ ಅಲ್ಲ; ಸಿಂಹವನ್ನೇ ಹೋಲುವ ನಾಯಿ!. ಇದರ ಬೆಲೆ ಮಾತ್ರ ಸಿಂಹಕ್ಕಿಂತಲೂ ಹೆಚ್ಚು. ಈ ನಾಯಿ ಚೀನಾ ದೇಶದ್ದು. ಜಗತ್ತಿನ ಹತ್ತು ಭಾರೀ ಬೆಲೆಯ ನಾಯಿಗಳಲ್ಲಿ ಇದೂ ಒಂದು.

ಕೆಂಪು ಟಿಬೆಟಿಯನ್ ಮ್ಯಾಸ್ಟಿಫ್ ಜಾತಿಗೆ ಸೇರಿದ ಇದು ಮೂರೂವರೆ ಅಡಿ ಎತ್ತರವಿದೆ. 170 ಪೌಂಡ್ ಭಾರವೂ ಇದೆ. ಸಿಂಹ ಗಾಂಭೀರ್ಯದಿಂದ ಮೆರೆಯುವ ಈ ದೈತ್ಯ ನಾಯಿಯ ವಯಸ್ಸು ಐದು ವರ್ಷ.

ಇನ್ನು ತಿನ್ನುವುದರಲ್ಲಿ ಇದು ಬಕಾಸುರ. ಗೋಮಾಂಸ, ಸಮುದ್ರ ಸೌತೇಕಾಯಿ ಎಂಬ ಮೀನು, ಮೃದ್ವಂಗಿ ಮತ್ತು ಕೋಳಿಯಿಂದ ತಯಾರಿಸಿದ ಚೀನೀ ಭಕ್ಷ್ಯಗಳನ್ನು ದಿನಕ್ಕೆ ಇಪ್ಪತ್ತು ಪೌಂಡ್ ತೂಕದಷ್ಟು ತಿನ್ನುತ್ತದೆಯಂತೆ. ಆಮೇಲೆ ಅದರ ಹಲ್ಲುಗಳನ್ನು ಸ್ವಚ್ಛಗೊಳಿಸಲು ಮೀನಿನ ತಲೆಯ ಪುಡಿ, ಮೊಟ್ಟೆಯ ಚಿಪ್ಪು, ಕಚ್ಚಾಮೂಳೆ ಇವನ್ನೆಲ್ಲ ಹಾಕುತ್ತಾರೆ. ಜೀರ್ಣಕ್ರಿಯೆಗಾಗಿ ಕೆಲವು ತೈಲಗಳನ್ನು ಕೊಡುತ್ತಾರೆ. ಈ ಜಾತಿಯ ಹೆಣ್ಣು ನಾಯಿ ಇಷ್ಟು ಎತ್ತರವಾಗುವುದಿಲ್ಲ.

ಅಪರೂಪದ ನಾಯಿಗೆ ವಿಶೇಷವಾದ ಮಜ್ಜನವೂ ಉಂಟು. ವಿಶ್ವಪ್ರಸಿದ್ಧವಾದ ನಾಯಿಯ ಬೆಲೆಯೂ ಸಣ್ಣದಲ್ಲ ಬಿಡಿ. ಹತ್ತು ದಶಲಕ್ಷ ಚೀನೀ ಯುವಾನ್ ಅಥವಾ 9,45,000 ಡಾಲರ್! ಇದಕ್ಕೆ ಭಾರೀ ಮೊತ್ತದ ವಿಮೆಯೂ ಇದೆ.

■ ಪರಾಶಾ

